# 10

# ಕರ್ತನ ದಿನ

## (1 ಥೆಸಲೊನೀಕ 5:1-11)

ಯೇಸುವಿನ ಪುನರಾಗಮನವು ನಂಬಿಗಸ್ತರಾದ ಕ್ರೈಸ್ತರಿಗೆ ನಿರೀಕ್ಷೆಯನ್ನು ನೀಡುತ್ತದೆ. ಯಾಕಂದರೆ ಅದು ಭವಿಷ್ಯದ ಭರವಸೆಯನ್ನು ನೀಡುವದರಿಂದ, ಅದು ವಿಶ್ರಾಂತಿಯನ್ನು ಮತ್ತು ಸಂತೃಸುವಿಕೆಯನ್ನು ಸಹ ನೀಡುತ್ತದೆ.

ಯೇಸುವಿನ ಬರೋಣಕ್ಕಾಗಿ ಕಾಯುವಾಗ, ನಾವು ಆ ದಿನಕ್ಕಾಗಿ ಸಿದ್ಧರಾಗಬೇಕು. 1 ಥೆಸಲೊನೀಕ 5ರ ಪ್ರಥಮ ಭಾಗದಲ್ಲಿ ಈ ವಿಷಯವನ್ನು ನೋಡುತ್ತೇವೆ. ಯೇಸುವಿನ ಬರೋಣದ ಚರ್ಚೆಯು, ಥೆಸಲೊನೀಕ ಕ್ರೈಸ್ತರಿಗೆ ಪ್ರೋತ್ಸಾಹ ನೀಡಿತ್ತು. ಇದಕ್ಕೆ ಕಾರಣ ಅವರು ಯೇಸುವಿನ ಬರೋಣದ ಬಗ್ಗೆ ಅರಿತಿರಲಿಲ್ಲ ಎಂಬುದಾಗಿ ಇರದೆ, ಅವರು ಆತನ ಬರೋಣಕ್ಕಾಗಿ ಸಿದ್ಧರಾಗಿರಲಿಲ್ಲ ಎಂಬ ಕಾರಣವಾಗಿದೆ. "ಈ ಸಂಗತಿಗಳು ನಡೆಯ ಬೇಕಾದ ಕಾಲಗಳನ್ನು ಗಳಿಗೆಗಳನ್ನೂ ಕುರಿತು ನಿಮಗೆ ಬರೆಯುವುದು ಅವಶ್ಯವಿಲ್ಲ" (5:1ಬಿ). "ಆದದ್ದರಿಂದ ನೀವು ಈಗ ಮಾಡುತ್ತಿರುವ ಪ್ರಕಾರವೇ" (5:11ಸಿ), ಎಂದು ಅಂತ್ಯಗೊಳ್ಳುತ್ತದೆ, ಅವರು ಯೇಸುವಿನ ಬರೋಣದ ಕುರಿತು ತಿಳಿದವರಾಗಿ ಒಳ್ಳೆಯದಾಗಿ ಜೀವಿಸುತ್ತಿದ್ದರು ಎಂಬ ಸೂಚನೆಯಾಗಿದೆ. ಥೆಸಲೊನೀಕದವರು ತಿಳಿದಂತಹ ಮತ್ತು ಆಚರಣೆ ಮಾಡುತ್ತಿದ್ದಂತಹ ವಿಷಯದಲ್ಲಿ ಮುಂದುವರಿಯ ಬೇಕೆಂದು ಪೌಲನು ಉತ್ತೇಜನ ನೀಡಿದ್ದನು.

ಯೇಸುವಿನ ಬರೋಣದ ಕುರಿತು ನಾವು ಹೆಚ್ಚು ತಿಳಿದುಕೊಳ್ಳುವಾಗ, ನಾವು ನಮ್ಮ ಜೀವಿತವನ್ನು ಉತ್ತಮಪಡಿಸಿಕೊಂಡು, ಆತನ ಬರೋಣಕ್ಕೆ ಸಿದ್ಧರಾಗುವೆವು. ಯೇಸುವಿನ ಬರೋಣವು ಹೇಗಿರುತ್ತದೆ, ಮತ್ತು ನಾವು ಹೇಗೆ ಸಿದ್ಧರಾಗಬೇಕು?

### ಆತನ ಬರೋಣಕ್ಕಾಗಿ ಸಿದ್ಧರಾಗಿರಿ! (5:1-3)

ಪೌಲ, ಸೀಲ ಮತ್ತು ತಿಮೊಥೆಯರು ಯೇಸುವಿನ ಬರೋಣದ ಕುರಿತಾಗಿ ಪ್ರಸಂಗ ಮಾಡಿದ್ದರು. ಆತನ ಬರೋಣದ ಸಮಯದ ಅನಿಶ್ಚಯತೆಯ ಕುರಿತು ತಿಳಿಸಿದ್ದರು. ಥೆಸಲೊನೀಕದವರು ಈ ಎರಡು ಸಂದೇಶಗಳನ್ನು ಸ್ವೀಕರಿಸಿದ್ದರು (5:1).

ನಾವು ಈಗಾಗಲೇ ಬೋಧಿಸಿರುವ ವಿಷಯಗಳನ್ನು, ಪುನಃ ಬೋಧಿಸುವದು ಅನಗತ್ಯ ಎಂದು ಬೋಧಕರಾದ ನಾವುಗಳು ತಿಳಿಯುತ್ತೇವೆ, ಬಹುಶಃ ಪದೇ ಪದೇ ಹೇಳುವ ಸಂದೇಶ ಗಳನ್ನು ಸಹೋದರರು ಸ್ವೀಕರಿಸದೆ ಇರಬಹುದು. ಆದರೆ ಈ ಸಂದೇಶವು ಆಸಕ್ತಿಯನ್ನು ಕುಂದಿಸಿ, ಬೇಸರವನ್ನು ಉಂಟುಮಾಡಲಿಲ್ಲ; ಈ ಸಂದೇಶವನ್ನು ದೇವರೇ ಪುನರಾವರ್ತಿಸಲು ತಿಳಿಸಿದ್ದನು. ಈ ಸಭೆಯು ಬೆಳವಣಿಗೆಯಾಗಿ, ಪರಿಪಕ್ವತೆಗೆ ಬರಲು ಇದು ಸಹಾಯ ವಾಗಿತ್ತು.

ಆ ಸಂದೇಶವೇನು? ಕರ್ತನು ನೆನಸದೆ ಇರುವಾಗ, ತಕ್ಷಣವೇ ಬರುವ ಸಂದೇಶ ವಾಗಿತ್ತು, ರಾತ್ರಿ ಕಾಲದಲ್ಲಿ ಕಳ್ಳನು ಬರುವಂತ ಸಮಯದಂತೆ (5:2). ಯೇಸುವಿನ ಬರೋಣದ ಸಮಯವನ್ನು ತಿಳಿಸುವ ಪ್ರಸಂಗಿಗಳು ಈ ಸಂದೇಶವನ್ನು ಒಪ್ಪಿಕೊಳ್ಳುವದಿಲ್ಲ. ಅವರ ಊಹೆಗಳು ನಿರರ್ಥಕವಾದ ಸಂದೇಹಗಳೇ. ಇದಕ್ಕೆ ವ್ಯತಿರಿಕ್ತವಾಗಿ ಆ ಪ್ರಸಂಗಿಗಳು ಯೇಸುವಿನ ಬರೋಣದ ಸಂದೇಶವನ್ನು ನಂಬುತ್ತಾರೆ. ವಿನಃ ಅನಿಶ್ಚಯ ವಾದ ಸಮಯದ ಕುರಿತು ಅರಿತವರಲ್ಲ.

ಥೆಸಲೊನೀಕದವರು ಕ್ರೈಸ್ತರಾದ ಸಂದರ್ಭದಲ್ಲಿ, ಯೇಸು ಅವರನ್ನು ರಕ್ಷಿಸುವನೆಂದು ಅರಿತಿದ್ದರು. ಅವರು ದೇವರ ಕೃಪೆಯಲ್ಲಿದ್ದು, ಪಾಪದ ಫಲಿತಾಂಶದಿಂದ ತಪ್ಪಿಸಿಕೊಂಡಿದ್ದರು ಎಂದು ತಿಳಿದಿದ್ದರು (1:10). ಕೆಲವರು, ಯೇಸು ಪುನಃ ಬರುವದಿಲ್ಲ ಮತ್ತು ಅವರ ಪಾಪಗಳಿಗಾಗಿ ಅವರಿಗೆ ಪ್ರತಿಫಲವಿಲ್ಲವೆಂದು ತಿಳಿದಿರುವರು. ಅವರ ಸುರಕ್ಷೆಗೆ ವಿರೋಧವಿಲ್ಲ ವೆಂದೂ ತಿಳಿದಿದ್ದರು. ಯೇಸುವಿನ ಬರೋಣವು ಕ್ರಿಸ್ತ ನಂಬಿಕೆಯಿಲ್ಲದವರಿಗೆ ಶಿಕ್ಷೆಯನ್ನು ಮತ್ತು ನಾಶನವನ್ನು ತರುತ್ತದೆ. ಗರ್ಭಿಣಿಗೆ ಪ್ರಸವೇ ವೇದನೆ ಬರುವ ಪ್ರಕಾರ ಬರುವದು, ಅದು ತಕ್ಷಣವೇ ಆಗುವದು (5:3). ಆತನಲ್ಲಿ ನಂಬಿಕೆ ಇಟ್ಟಿರುವವರನ್ನು ಕರೆದೊಯ್ಯಲು ಯೇಸು ಬರುವನು. ನಂಬಿಕೆಯಿಲ್ಲದವರು ಪಾಪದ ಶಿಕ್ಷೆಗೆ ಒಳಗಾಗುವರು.

ಈ ಕ್ರೈಸ್ತರು ವಿದೇಯರಾಗಲೇ ಬೇಕೆಂದು ಭಯಪಡಿಸುವ ಸಲುವಾಗಿ ಯೇಸುವಿನ ಬರೋಣದ ಕುರಿತು ಹೇಳಿರುವದಿಲ್ಲ. ಆ ವಿಷಯದ ಬಗೆಯ ಸತ್ಯವನ್ನು ಅವರು ಸ್ಪಷ್ಟ ವಾಗಿ ಅರಿತಿದ್ದರು. ಅವರು ದೇವರ ಕಡೆಯಲ್ಲಿದ್ದು, ಯೇಸು ನೀಡುವ ಆತ್ಮೀಕ ಚಿಂತನೆಗೆ ಒಳಪಟ್ಟು ಲಾಭ ಪಡೆಯಬೇಕೆಂದು ಈ ಸಂದೇಶವನ್ನು ನೀಡಲಾಯಿತು. ಅದೇ ಸಮಯದಲ್ಲಿ, ಯೇಸು ಬಯಸುವಂತ ಜೀವಿತವನ್ನು ಅವರು ಜೀವಿಸಬೇಕಿತ್ತು.

ಯೇಸುವಿನ ಬರೋಣದ ಅನಿಶ್ಚಯವಾದ ಸಮಯದ ಬಗ್ಗೆ ನಮಗೆ ಮನವರಿಕೆಯಾಗಿದೆಯೇ? ನಮ್ಮ ದಿನ ನಿತ್ಯದ ಜೀವಿತದಲ್ಲಿ ಇದರ ನೆನಪು ನಮಗಿದೆಯೇ? ಈ ವಿಶೇಷವಾದ ಸತ್ಯದ ಬಗ್ಗೆ ಪ್ರತೀವಾರ ಹಾಗೂ ದಿನ ನಿತ್ಯ ನಾವು ನೆನಪು ಮಾಡಿ ಕೊಳ್ಳಬೇಕು!

## ಬೆಳಕಿನ ಮಕ್ಕಳಾಗಿರ್ರಿ! (5:4-7)

ಹೊಸ ಒಡಂಬಡಿಕೆಯಲ್ಲಿ, ಬೆಳಕು ಹಾಗೂ ಹಗಲು ದೇವರಿಗೆ ಸಮಂಜಸವಾಗಿದೆ; ಕತ್ತಲೆ ಹಾಗೂ ರಾತ್ರಿ ಸೈತಾನನಿಗೆ ಸಮಂಜಸವಾಗಿವೆ. "ದೇವರು ಬೆಳಕಾಗಿದ್ದಾನೆ, ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆ ಇಲ್ಲ" (1 ಯೋಹಾನ 1:5ಬಿ). ಯೇಸುವನ್ನು "ಲೋಕಕ್ಕೆ ಬೆಳಕು ..." ಎಂದು ಕರೆಯಲಾಗಿದೆ (ಯೋಹಾನ 8:12). "ದೇವರನ್ನು ಅನುಸರಿಸುವವರು ಬೆಳಕಿನ ಮಕ್ಕಳಾಗಿದ್ದಾರೆ" (ಎಫೆಸ 5:8). ಇದಕ್ಕೆ ವ್ಯತಿರಿಕ್ತವಾಗಿ, ಸೈತಾನನು "ಕತ್ತಲ ಸಾಮ್ರಾಜ್ಯವನ್ನು ಹೊಂದಿದ್ದಾನೆ, ..." (ಕೊಲೊಸ್ಸೆ 1:13). ಅವನನ್ನು ಅನುಸರಿಸುವವನು "ಕತ್ತಲಲ್ಲಿ ನಡೆಯುವವನಾಗಿರುತ್ತಾನೆ" (1 ಯೋಹಾನ 12:35).

ಈ ವ್ಯಾಖ್ಯಾನದಲ್ಲಿ ದೇವರ ಸ್ವಭಾವಕ್ಕೂ ಮತ್ತು ಸೈತಾನ ಸ್ವಭಾವಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಒತ್ತಿ ಹೇಳಲಾಗಿದೆ. ದೇವರ ವಾಕ್ಯವು ಯಾವಾಗಲೂ ಸತ್ಯವಾಗಿರುತ್ತದೆ (ಯೋಹಾನ 17:17), ಆದರೆ ಸೈತಾನನು ಸುಳ್ಳುಗಾರನು ಮತ್ತು ಸುಳ್ಳಿನ ತಂದೆಯಾಗಿದ್ದಾನೆ (ಯೋಹಾನ 8:44). ದೇವರು ನಮ್ಮನ್ನು ಸೇರಿಸಿ ಕೊಂಡಿರುವದರಿಂದ, ನಾವು "ಬೆಳಕಿನ ಮಕ್ಕಳು ಹಾಗೂ ಹಗಲಿನವರು ಆಗಿದ್ದೇವೆ" (5:5ಎ). ಎಂದು ಈ ಪತ್ರಿಕೆಯು ಕ್ರೈಸ್ತರಿಗೆ ನೆನಪು ಮಾಡುತ್ತದೆ.

ದೇವರಿಗೂ ಮತ್ತು ಸೈತಾನನಿಗೂ ವ್ಯತ್ಯಾಸ ಇರುವ ಹಾಗೆ, ದೇವರ ಕಡೆಯವರಿಗೂ ಮತ್ತು ಸೈತಾನನ ಕಡೆಯವರ ನಡುವೆ ವ್ಯತ್ಯಾಸಗಳಿರಲೇಬೇಕು (5:5ಬಿ-7). ಒಂದು ವೇಳೆ ನಾವು ಪರಲೋಕ ತಂದೆಯ ಯಥಾರ್ಥವಾದ ಶಿಷ್ಯರಾಗಿದ್ದರೆ, ನಾವು ಆತನನ್ನೆ ದೃಷ್ಟಿಸು ತ್ತೇವೆ. ನಾವು ಹೇಗೆ ತಂದೆಯಂತೆ ಕಾಣಿಸಿಕೊಳ್ಳಬಹುದು? ನಮ್ಮ ವರ್ತನೆಯಿಂದಲೇ! ಈ ವರ್ತನೆಯ ವಿವರಣೆಯು "ಸ್ವಸ್ತಚಿತ್ತರಾಗಿರುವದೇ" (ವಚನ 6ಬಿ). ಅಲಕ್ಷಕರವಾದ ಅಥವಾ ಮುತ್ತಿನಲ್ಲಿರುವ ಮನಸ್ಸು ಸರಿಯಾದ ವರ್ತನೆಯ ಆಯ್ಕೆಯನ್ನು ಮಾಡಲಾರದು.

ಥೆಸಲೊನೀಕದ ಸನ್ನಿವೇಶವನ್ನು ಊಹಿಸಿಕೊಳ್ಳಿರಿ. ಕ್ರೈಸ್ತರಾದಂತವರು ಅವರ ನಂಬಿಕೆಗಾಗಿ ಹಿಂಸೆಗೊಳಗಾಗಿದ್ದರು. ಅವರು ದೇವರನ್ನು ಅನುಸರಿಸದಂತೆ ಸೈತಾನನು

ತನ್ನ ತಂತ್ರೋಪಾಯಗಳನ್ನು ಮಾಡಿದ್ದನು. ಒಬ್ಬನು ಸ್ವಸ್ತ ಚಿತ್ತನಾಗದೇ ಇದ್ದರೆ ವಿಗ್ರಹಗಳ ಆರಾಧನೆಯನ್ನು ಮಾಡುವದಕ್ಕೂ ಅಥವಾ ತಪ್ಪು ದೇವತೆಗಳನ್ನು ಸನ್ಮಾನಿಸುವದಕ್ಕೆ ಅವನು ಪ್ರಚೋದಿತಗೊಳ್ಳುತ್ತಾನೆ. ಒಬ್ಬನು ತನ್ನ ಸಹೋದ್ಯೋಗಿಗಳ ಮೇಲೆ ನಿಯಂತ್ರಣ ಹೊಂದದೆಯಿದ್ದರೆ, ಅವನ ಸುತ್ತಲಿರುವವರು ಆಚರಿಸುವ ಅನೈತಿಕತೆಗೂ ಮತ್ತು ದೈವ ಭಕ್ತಿಯಿಲ್ಲದ ಸನ್ನಿವೇಶಕ್ಕೂ ಸುಲಭವಾಗಿ ಒಳಗಾಗುವನು! ಹಳೆಯ ಪ್ರಸಿದ್ಧಿಹೊಂದಿದ ಜೀವಿತಕ್ಕೆ ಹಿಂದಿರುಗುವದು ಬಹಳ ಸುಲಭವಾಗಿರುತ್ತದೆ.

ಈ ಕ್ರೈಸ್ತರು ಸ್ವಸ್ತಚಿತ್ತದಿಂದ ಅವರ ಸುತ್ತಲಿದ್ದ ಶೋಧನೆಯನ್ನು ಜೈಸ ಬೇಕಿತ್ತು, ಅವರು ಎಚ್ಚರವಾಗಿದ್ದು ಅವರ ಪ್ರತಿ ನುಡಿಗಳು ಹಾಗೂ ಕ್ರಿಯೆಗಳು ಸತ್ಯದೇವರನ್ನೇ ಗೋಚರಿಸಬೇಕಿತ್ತು. ಅವರ ವ್ಯತ್ಯಾಸವುಳ್ಳವರಾಗಿದ್ದರಿಂದ, ಜನರ ನಿಂದನೆಗೆ ಒಳಗಾದರು: ಆದರೆ ಅವರು ತಾವುಗಳು ದೇವರ ಮಕ್ಕಳೆಂದು ತೋರ್ಪಡಿಸಿಕೊಂಡರು.

ನಮ್ಮ ಕುರಿತು ಏನು? ನಾವು ಸ್ವಸ್ತ ಚಿತ್ತರಾಗಿದ್ದು ಹತೋಟಿಯಲ್ಲಿದ್ದೇವೋ, ಅಥವಾ ನಮ್ಮ ಹಣವನ್ನು ಜೂಜಿನಲ್ಲಿ ವ್ಯಯಮಾಡಿ, ದೇವರ ಹೆಸರಿಗೆ ಕಳಂಕತರುತ್ತಿರುವೆವೋ, ಅಥವಾ ಇತರರು ಈ ಚಟುವಟಿಕೆಗಳನ್ನು ಮಾಡುತ್ತಿರುವದರಿಂದ ನಾವು ನಮ್ಮ ಕೆಲಸಗಾರರನ್ನು ಮೋಸಪಡಿಸುತ್ತಿರುವೆವೋ? ನಾವು ನಮ್ಮನ್ನು ಸೈತಾನನ ವ್ಯರ್ಥವಾದ ಕಾರ್ಯಗಳಿಗೂ ಮತ್ತು ಇತರರನ್ನು ಆಕರ್ಷಿಸುವ ನಾಶಕರವಾದ ಸಮಯಕ್ಕೂ ಒಳಪಡದೇ ಹೋದರೆ ನಾವುಗಳು ವಿಶೇಷವಾದ ಸ್ಥಾನದಲ್ಲಿ ನಿಂತಿರುತ್ತೇವೆ.

ಮಾದಕ ವಸ್ತುಗಳನ್ನು ಅಥವಾ ಕುಡಿತವನ್ನು ನಿರಾಕರಿಸಿದರೆ ನಾವು ವ್ಯತ್ಯಾಸ ವುಳ್ಳವರಾಗಿದ್ದು ಸ್ವಸ್ತ ಚಿತ್ತರೂ ಹಾಗೂ ನಮ್ಮ ಪಂಚೇಂದ್ರಿಯಗಳನ್ನು ಪೂರ್ಣವಾಗಿ ಹತೋಟಿಯಲ್ಲಿಡುವವರಾಗಿರುತ್ತೇವೆ ನಮ್ಮ ವರ್ಚಸ್ಸನ್ನು ಕುಗ್ಗಿಸುವಂತ ಅಥವಾ ಕೆಟ್ಟ ಮಾದರಿಯಾಗಿರಲು ಆಸ್ಪದವಿರುವ ಸ್ಥಳಗಳನ್ನು ಆರಿಸಿಕೊಳ್ಳದೆ ಹೋದರೆ ನಾವು ಉನ್ನತ ಸ್ಥಾನದಲ್ಲಿ ಇರುವವರಾಗಿರುತ್ತೇವೆ, ಕತ್ತಲ ಪ್ರಪಂಚದಲ್ಲಿ ನಾವುಗಳು ಹಗಲಿನವರೆಂದು ಗಮನಿಸಲ್ಪಡುತ್ತೇವೆ. ಫಿಲಿಪ್ಪಿಯ ಕ್ರೈಸ್ತರಿಗೆ ಹೇಳಿದಂತೆ, “ಹೀಗೆ ನೀವುಗಳು ನಿರ್ದೋಷಿಗಳು ಯಥಾರ್ಥಮನಸ್ಸುಳ್ಳವರಾಗಿದ್ದು ವಕ್ರಬುದ್ದಿಯುಳ್ಳ ಮೂರ್ಖ ಜಾತಿಯ ಮದ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿರುವಿರಿ” (ಫಿಲಿಪ್ಪಿ 2:15).

ನಾವು ಈಗಿರುವಂತೆ ದೇವರ ಹಾಗೆಯೂ ಯೇಸುವಿನ ಜೀವಿತವನ್ನು ಜೀವಿ ಸುವಂತೆಯೂ, “ದೇವರ ಪ್ರಿಯರಾದ ಮಕ್ಕಳಿಗೆ ತಕ್ಕಹಾಗೆ ಆತನನ್ನು ಅನುಸರಿಸುವವ ರಾಗಿರ್ರಿ” (ಎಫೆಸ 5:1). ಎಂಬ ಸವಾಲನ್ನು ಕ್ರೈಸ್ತರಾದ ನಾವು ಹೊಂದಿರುವೆವು. ಪರಲೋಕದ ತಂದೆಯಂತೆ ನಾವುಗಳು ಇರುವೆವೋ? ಜನರು ನಮ್ಮನ್ನು ನೋಡಿ, “ಇವನು ಪರಲೋಕದ ತಂದೆಯಂತಿರುವನು,” ಅಥವಾ ಈಕೆಯು ದೇವರ ಬಯಕೆಯಂತೆಯೇ ಇರುವಳೋ? ಎಂದು ಹೇಳಬಹುದೇ ಅದು ನಮಗೆ ಪ್ರಾಮುಖ್ಯವಾದ ಬಿರುದಾಗಿರುತ್ತದೆ!

## ದೇವರ ಆಯುಧಗಳನ್ನು ಧರಿಸಿಕೊಳ್ಳಿರಿ! (5:8-10)

ಈ ಪ್ರಕಾರವಾದ ಜೀವಿತವನ್ನು ಜೀವಿಸಲು ಥೆಸಲೊನೀಕದವರು ಯಾವ ವಿಧದಲ್ಲಿ ಸಿದ್ಧಗೊಂಡರು? ಅವರು ಸ್ವಸ್ಥ ಚಿತ್ತರಾಗಿದ್ದು, ಸೈತಾನನ ಸವಾಲುಗಳನ್ನು ಹೇಗೆ ಎದುರಿಸಿದರು? ಅವರು ದೇವರ ಆಯುಧಗಳನ್ನೇ ಬಳಸಿದರು. ದೇವರಂತೆ ಇರುವದು ಸ್ವಾಭಾವಿಕವಾದದ್ದಲ್ಲ. ಅದು ಅವರ ಸಹಜ ಪ್ರವೃತ್ತಿಯಿಂದಲೂ ಬರುವದಿಲ್ಲ. ಅವರು ತಮ್ಮ ಇಚ್ಚಾನುಸಾರವನ್ನು ತೃಪ್ತಿಪಡಿಸಿಕೊಳ್ಳುವದರಿಂದ ದೇವರ ಮಕ್ಕಳಾಗುವದಿಲ್ಲ. ಅವರು ದೇವರ ಆಯುಧಗಳನ್ನು ಧರಿಸಿಕೊಳ್ಳಬೇಕು. “ಅವರು ವಿಶ್ವಾಸ ಪ್ರೀತಿಗಳೆಂಬ ವಜ್ರಕವಚವನ್ನೂ ರಕ್ಷಣೆಯ ನಿರೀಕ್ಷೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳೋಣ” (5:8ಬಿ). ಅವರಿಗಾಗಿ ದೇವರು ರಕ್ಷಣೆಯ ಉದ್ದೇಶವನ್ನು ಇಟ್ಟಿರುವನು, ಅವರಿಗೂ ಸಹ ಇದು ಮುಖ್ಯ ಉದ್ದೇಶವಾಗಿರಬೇಕು.

ದೇವರು ಅವರಿಗೆ ಸಹಾಯಕನು.

ದೇವರು ನಮ್ಮ ರಕ್ಷಣೆಯನ್ನು ಬಯಸಿ ಸೈತಾನನ ರಾಜ್ಯದ ಕತ್ತಲೆಯನ್ನು ಎದುರಿಸಲು ನಮ್ಮನ್ನು ಸಿದ್ಧಪಡಿಸುವನು, ಯಾವ ಆಯುಧಗಳನ್ನು ನಾವುಗಳು ಧರಿಸಬೇಕೆಂದು ದೇವರು ಬಯಸುತ್ತಾನೆ? ಪ್ರೀತಿ, ನಂಬಿಕೆ, ಮತ್ತು ನಿರೀಕ್ಷೆ.

ನಾವು ದೇವರಲ್ಲಿ ಭರವಸವಿಟ್ಟು, ಆತನನ್ನು ಪ್ರೀತಿಸಿ ಮತ್ತು ನಮ್ಮ ಸಹೋದರರನ್ನು ಪ್ರೀತಿಸಿ, ನಮ್ಮ ನಿತ್ಯವಾದ ಚಿಂತನೆಗಳಿಗೆ ಆತನನ್ನೇ ದೃಷ್ಟಿಸುವುದಾದರೆ ಕತ್ತಲ ಪ್ರಪಂಚದಲ್ಲಿ ಬೆಳಕಿನಂತೆ ಪ್ರಜ್ವಲಿಸುತ್ತೇವೆ. ಆಗ ನಾವು ಕತ್ತಲ ರಾಜ್ಯದ ಸೈತಾನನನ್ನು ಎದುರಿಸುತ್ತೇವೆ. ಮಕ್ಕಳು ತಮ್ಮ ತಂದೆ ತಾಯಿಯರಲ್ಲಿ ಭರವಸವನ್ನು, ಪ್ರೀತಿಯನ್ನು ಇಟ್ಟು, ಅವರ ಕೊರತೆಗಳು ನೀಗುವಂತೆ ಅವರ ಮೇಲೆ ಅವಲಂಭಿಸಿರುವಂತೆ, ನಾವು ತಂದೆಯ ಕೈಗಳಿಗೆ ನಿಮ್ಮ ಜೀವಿತ ವನ್ನು ಸಮರ್ಪಿಸಬೇಕು. ಆತನಲ್ಲಿ ಭರವಸವಿಟ್ಟು, "ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ" (1 ಪೇತ್ರ 5:7).

## ಪರಸ್ಪರ ಸಹಾಯಿಸಿರಿ! (5:11)

ದೇವರು ನಮ್ಮ ತಂದೆಯಾಗಿರುವದರಿಂದ, ನಾವುಗಳು ಸಹೋದರ ಸಹೋದರಿಯ ರಾಗಿದ್ದು: ದೇವರ ಕುಟುಂಬವಾಗಿರುವೆವು. ನಾವು ಸಭೆಯ ಸದಸ್ಯರಾಗಿರುವದರಿಂದ ನಮ್ಮ ಕುಟುಂಬಗಳಿಗೆ ಸಹಾಯಿಸಬೇಕು.

ನಮ್ಮ ಸಹೋದರ ಸಹೋದರಿಯರಿಗೆ, ಸಹಾಯಿಸಲು ದೇವರು ಮಾರ್ಗದರ್ಶನವನ್ನು ನೀಡಿರುವನು: "ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸುತ್ತಾ ಇರ್ರಿ ..." (5:11). ಅದು ನಮ್ಮ ಗುರಿಯಾಗಿದೆಯೇ? ನಾವು ನಮ್ಮ ಸಹೋದರ ಸಹೋದರಿಯರನ್ನು ನೋಡಿ, "ನಿನ್ನ ವೃದ್ಧಿ ಮತ್ತು ಉತ್ತೇಜನಕ್ಕಾಗಿ ನಾನು ಕೆಲಸ ಮಾಡುತ್ತಿರುವೆನು ಎಂದು ಹೇಳಬಹುದೇ?" ನಾವು ಅವರನ್ನು ಮುಖಾಮುಖಿಯಾಗಿ ನೋಡಿ ಮನವರಿಕೆ ಮಾಡಬಹುದೇ, ನಿನ್ನ ವೃದ್ಧಿ ಮತ್ತು ಉತ್ತೇಜನಕ್ಕಾಗಿ ಕೆಲಸ ಮಾಡುತ್ತಿರುವೆನು ಎನ್ನಬಹುದೇ? ಜೊತೆ ಕ್ರೈಸ್ತರಲ್ಲಿ ಒಬ್ಬ ಸಹೋದರರು ಅಥವಾ ಸಹೋದರಿ ನನ್ನ ವೃದ್ಧಿ ಮತ್ತು ಉತ್ತೇಜನಕ್ಕಾಗಿ ಕೆಲಸ ಮಾಡುತ್ತಿರುವರು ಎಂದು ಹೇಳಬಹುದೇ?

ಕತ್ತಲಿನಿಂದ ಆವರಿಸಿರುವ ಬೆಳಕಿನ ರಾಜ್ಯದಲ್ಲಿ, ಈ ಕ್ರೈಸ್ತರು ಕೇವಲ ಆ ರಾಜ್ಯದ ಒಂದು ಅವಿಭಾಜ್ಯ ಅಂಗ ಎಂದು ಮಾತ್ರ ನೆನಪು ಮಾಡಿಕೊಳ್ಳದೆ, ದೇವರ ಕುಟುಂಬದವರು ಎಂದು ನೆನಪು ಮಾಡಬೇಕೆಂದು ದೇವರು ಬಯಸಿದನು. ಸಹಾಯ ಮಾಡುವಂಥ ಸಭೆ ಅದರಲ್ಲಿರುವ ಸಹೋದರ, ಸಹೋದರಿಯು ಉತ್ತೇಜನಕ್ಕಾಗಿಯೂ ಕರುಣಿಸುವದಕ್ಕಾಗಿಯೂ, ಎಚ್ಚರಿಸುವದಕ್ಕಾಗಿಯೂ, ಪ್ರೀತಿಸುವದಕ್ಕಾಗಿಯೂ ಇರುವಾಗ, ಇದಕ್ಕಿಂತ ಉತ್ತಮವಾದ ಮಾರ್ಗವು ಇದೆಯೇ?

ಕ್ರೈಸ್ತರಾದವರು ಒಂಟಿಗರಲ್ಲ. ತ್ಯಜಿಸಲ್ಪಟ್ಟವರು ಎಂಬ ಆಲೋಚನೆಯು ಇರಬಾರದು. ಇತರರು ನಮಗಾಗಿ ಚಿಂತಿಸುವದಿಲ್ಲ. ನಾವು ಅನರ್ಹರು ಎಂಬ ಭಾವನೆಯು ಇರಬಾರದು. ನಮ್ಮ ಜೊತೆ ಕ್ರೈಸ್ತರು ನಮಗೆ ಉತ್ತೇಜನದ ಆದರಣೆಗಾಗಿ ಇರುವರು ಎಂದು ತಿಳಿಯಬೇಕು - ಅದು ಕೇವಲ ನಮ್ಮ ಉಳಿಯುವಿಕೆಗಾಗಿ ಆಗಿರದೆ, ನಮ್ಮ ಬಲದ ವೃದ್ಧಿಗಾಗಿ ಇರುತ್ತದೆ, ಆದರಿಂದ ನಾವು ಬೆಳೆದು ಪರಿಪಕ್ವತೆಗೆ ಸಾಗು ವೆವು.

ಸಭೆಯಲ್ಲಿ ಇದು ಯಾವಾಗಲು ನಡೆಯುವದಿಲ್ಲ ಏಕೆ? ಬಹುಶಃ ಈ ವಿಧವಾದ ಸಹಾಯದ ಬಗ್ಗೆ ನಾವು ಬೋಧನೆ ಹೊಂದಿರುವದಿಲ್ಲ. ಒಂದು ವೇಳೆ ಬೋಧಿ ಸಲ್ಪಟ್ಟಿದ್ದರೂ ಅದನ್ನು ನಮ್ಮ ಹೃದಯಕ್ಕೆ ಗಂಭೀರವಾಗಿ ತೆಗೆದುಕೊಂಡಿರುವದಿಲ್ಲ. ಅಥವಾ ಸಹಾಯಿಸಲು ಅಥವಾ ಸಹಾಯವನ್ನು ಪಡೆಯಲು ನಾಚಿಕೆವುಳ್ಳ ವರಾಗಿರಬಹುದು. ಅಥವಾ ನಮ್ಮ ಜೊತೆ ಕ್ರೈಸ್ತರಿಗೆ ಯಾವುದೇ ನಿರ್ದಿಷ್ಟವಾದ ತೊಂದರೆಗಳಿಲ್ಲ ಎಂದು ಭಾವಿಸಿರುತ್ತೇವೆ (ಒಂದು ವೇಳೆ

ಸರ್ಕಾರದಿಂದ ಹಿಂಸೆ). ಅವರಿಗೆ ಅದರಿಂದ ಯಾವುದೇ ಲಾಭವಿರುವದಿಲ್ಲ.

ದೇವರ ಇಚ್ಛೆಯನ್ನು ನೆರವೇರಿಸುವದೇ ಪ್ರತಿ ಕ್ರೈಸ್ತರ ಆಧ್ಯತೆಯಾಗಿರಬೇಕು. ಪ್ರತಿ ಕುಟುಂಬದ, ಸಭೆಯ, ಹಿರಿಯರ, ಪ್ರಸಂಗಿಗಳ, ಪ್ರತಿ ಬೋಧಕರ ಚಿಂತನವಾಗಿರಬೇಕು. ಈ ವಿಧವಾದ ಜೀವಿತದಿಂದ ಇತರರಿಗೂ ಮತ್ತು ನಮಗೂ ಸಹಾಯವಾಗ ಬೇಕು. ಈ ಸಹಾಯವು ನಮ್ಮನ್ನು ಕ್ರಿಸ್ತನ ಬರೋಣಕ್ಕೆ ಸಿದ್ಧಪಡಿಸುತ್ತದೆ.

## ಮುಕ್ತಾಯ

ಯೇಸುವಿನ ಆಗಮನವು ನಂಬಿಗಸ್ತರಾದ ಕ್ರೈಸ್ತರ ಜೀವಿತದ ಪ್ರಮುಖ ಅಂಶ ಹಾಗೂ ಮುಂದಿನ ಉತ್ತಮವಾದ ಜೀವಿತದ ಆರಂಭ. ಆತನ ಬರೋಣದಲ್ಲಿಯೂ ಮತ್ತು ನೂತನ ಆರಂಭದ ಜೀವಿತವು ಪ್ರತಿ ಕ್ರೈಸ್ತರ ಆದ್ಯತೆಯಾಗಿರಬೇಕು. ಅದು ಅವನಿಗೂ ಮತ್ತು ಅವನ ಸಹೋದರರಿಗೂ, ಧ್ಯೇಯವಾಗಿರಬೇಕು. ಪ್ರತಿ ಕುಟುಂಬದ, ಸಭೆಯ, ಹಿರಿಯರ ಪ್ರಸಂಗಿಗಳ, ಪ್ರತಿ ಬೋಧಕರ ಚಿಂತನವಾಗಿರಬೇಕು. ಈ ವಿಧವಾದ ಜೀವಿತದಿಂದ ಇತರರಿಗೂ ಮತ್ತು ನಮಗೂ ಸಹಾಯವಾಗಬೇಕು. ಈ ಸಹಾಯವು ನಮ್ಮನ್ನು ಕ್ರಿಸ್ತನ ಬರೋಣಕ್ಕೆ ಸಿದ್ಧಪಡಿಸುತ್ತದೆ.

ಈ ಕರ್ತನ ದಿನಕ್ಕಾಗಿ ಹಾರೈಸುತ್ತಿರುವೆವೋ? ಇದು ನಿಜವಾಗಿ ನಡೆಯಬೇಕು ಎಂದು ತಿಳಿದಿರುವಿರಾ? ಅದನ್ನು ನಾವು ತುಟಿಯಿಂದಲೂ ಅಥವಾ ಮನಸ್ಸಿನಿಂದಲೂ ಮಾತ್ರ ಹೇಳದೆ, ಅದನ್ನು ನಮ್ಮ ಜೀವಿತದಲ್ಲಿಯೂ ಉತ್ತರಿಸಬೇಕು. ನಾವು ಬೆಳಕಿನ ಮಕ್ಕಳಾಗಿ ಜೀವಿಸಿ ಮತ್ತು ನಮ್ಮ ಸಹೋದರ ಸಹೋದರಿಯರು ಸಹ ಬೆಳಕಿನಲ್ಲಿ ನಡೆಯುವಂತೆ ಸಹಾಯಿಸೋಣ.